# ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.

## ಸಿ.ಸಿ. ಸಂಖ್ಯೆ: 463/2023

**ಸಾಕ್ಷಿಯನ್ನು ದಿಃ 14.12.2023 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

| | | | |
|---|---|---|---|
| ಹೆಸರು | ಮುಬಾರಕ್ ಪಾಷಾ | ಸಿಡಬ್ಲ್ಯೂ:1 | ಪಿಡಬ್ಲ್ಯೂ:1 |
| ತಂದೆಯ ಹೆಸರು | ಉಲ್ಫತ್ ಪಾಷಾ | | |
| ವಯಸ್ಸು | 14 ವರ್ಷ | | |
| ಉದ್ಯೋಗ | ವಿದ್ಯಾರ್ಥಿ | | |
| ವಾಸಸ್ಥಳ | ಹುಣಸೂರು | | |

ಈ ಸಾಕ್ಷಿಯು ಅಪ್ರಾಪ್ತ ಬಾಲಕನಾಗಿದ್ದು, ತಾನು 9ನೇ ತರಗತಿಯಲ್ಲಿ ಹುಣಸೂರು ಬಾಲಕರ ಪದವಿಪೂರ್ವ ಕಾಲೇಜನಲ್ಲಿ ಓದುತ್ತಿರುವುದಾಗಿ ಮತ್ತು ತಾನು ತನ್ನ ಅಜ್ಜ-ಅಜ್ಜಿ ಜೊತೆ ಹುಣಸೂರಿನಲ್ಲಿ ವಾಸವಾಗಿರುವುದಾಗಿ ನುಡಿದಾಗ ಸಾಕ್ಷಿಯನ್ನು ಕುರಿತು ನ್ಯಾಯಾಲಯವು ಈ ಕೆಳಗಿನ ಪ್ರಶ್ನೆಗಳನ್ನು ಸಾಕ್ಷಿಗೆ ಕೇಳಿ ಅವರಿಂದ ಉತ್ತರವನ್ನು ಪಡೆದುಕೊಳ್ಳಲಾಯಿತು.

ಪ್ರಶ್ನೆ-1ಃ ನೀವು ಈ ದಿನ ಎಲ್ಲಿಗೆ ಮತ್ತು ಯಾವ ಕಾರಣಕ್ಕಾಗಿ ಬಂದಿರುತ್ತೀರಿ?

ಉತ್ತರಃ ನ್ಯಾಯಾಲಯಕ್ಕೆ ಸಾಕ್ಷಿ ನುಡಿಯಲು ಬಂದಿರುತ್ತೇನೆ.

ಪ್ರಶ್ನೆ-2ಃ ಏನು ಸಾಕ್ಷಿ ನುಡಿಯಲು ಬಂದಿರುತ್ತೀರಿ?

ಉತ್ತರಃ ನನ್ನ ಮಾವನಿಗೆ ಆದ ಅಪಘಾತಕ್ಕೆ ಸಂಬಂಧಪಟ್ಟಂತೆ ಸಾಕ್ಷಿ ನುಡಿಯಲು ಬಂದಿದ್ದೇನೆ.

ಪ್ರಶ್ನೆ-3ಃ ಇದು ಏನು ಮತ್ತು ನಾನು ಯಾರು?

ಉತ್ತರಃ ಇದು ನ್ಯಾಯಾಲಯ ಮತ್ತು ಪೀಠಾಸೀನಾಧಿಕಾರಿಯನ್ನು ನ್ಯಾಯಾಧೀಶರು ಎಂದು ಸಾಕ್ಷಿ ಗುರುತಿಸಿರುತ್ತಾರೆ.

ಪ್ರಶ್ನೆ-4ಃ ಇಲ್ಲಿ ಏನು ಹೇಳಬೇಕು?

ಉತ್ತರಃ ಇಲ್ಲಿ ಸತ್ಯವನ್ನು ಹೇಳಬೇಕು, ಅದನ್ನು ಬಿಟ್ಟು ಬೇರೆ ಏನನ್ನು ಹೇಳಬಾರದು.

ಸದರಿ ಪ್ರಶ್ನೊತ್ತರಗಳಿಂದ ಬಾಲ ಸಾಕ್ಷಿಯ ಸಾಕ್ಷ್ಯ ನುಡಿಯಲು ಸಮರ್ಥನಿದ್ದಾನೆ ಎಂಬ ಅಭಿಪ್ರಾಯಕ್ಕೆ ಬಂದು ವಿಚಾರಣೆ ಮಾಡಲು ಅನುಮತಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ**

ರಫೀಕ ಖಾನ್‌ರವರು ನನಗೆ ಸೋದರ ಮಾವನಾಗಬೇಕು. ಅವರು ಈಗ ತೀರಿಕೊಂಡಿದ್ದಾರೆ. ದಿನಾಂಕ 15.01.2023 ರಂದು ನಾನು ಮತ್ತು ನನ್ನ ಸೋದರ ಮಾವ ಆತನಿಗೆ ಸೇರಿದ ಒಂದು ಗೂಡ್ಸ್ ಆಟೋ ಸಂಖ್ಯೆ ಕೆಎ–45 / 6776 ದಲ್ಲಿ ಹೆಜ್ಜೂರು ಜಾತ್ರೆಗೆ ಹೋಗಿ ಕಬ್ಬಿನ ಜೂಸ್ ಗಾಡಿ ನಿಲ್ಲಿಸಿ ಶಬ್ಬೀರ ನಗರಕ್ಕೆ ಬರುತ್ತಿರುವಾಗ, ನಾನು ಹಿಂದೆ ಕ್ಯಾಬಿನ್‌ನಲ್ಲಿ ನಿಂತಿದ್ದೆ. ಆಗ ಒಂದು ಬಿಳಿ ಬಣ್ಣದ ಹೊಂಡಾ ಆಕ್ಟೀವಾ ಗಾಡಿ ಶಬ್ಬೀರ ನಗರದ ಕಡೆಯಿಂದ ಅಡ್ಡಾದಿಡ್ಡಿಯಾಗಿ ಬರುತ್ತಿತ್ತು. ಆಗ ಸಮಯ ಮಧ್ಯಾಹ್ನ 2.50 ಗಂಟೆ ಆಗಿತ್ತು. ಇನ್ನೇನು ನಮ್ಮ ಗಾಡಿಗೆ ಗುದ್ದಬೇಕು ಎನ್ನುವಷ್ಟರಲ್ಲಿ ನನ್ನ ಮಾವ ತನ್ನ ಗಾಡಿಗೆ ಬ್ರೇಕ್ ಹಾಕಿದ್ದರಿಂದ, ಆಟೋ ಪಲ್ಟಿ ಆಯಿತು. ಇದರಿಂದ ನನ್ನ ಮಾವನ ಮೇಲೆ ಆಟೋ ಬಿದ್ದಿತು. ಆಗ ನ್ಯಾಯಾಲಯದ ಮುಂದೆ ಇರುವ ಆರೋಪಿ ಅವರ ಗಾಡಿಯನ್ನು ನಿಲ್ಲಿಸಿ ಬಂದು ನೋಡಿದರು. ಆಗ ನಾನು ಅವರ ಗಾಡಿ ನಂಬರನ್ನು ನೋಡಿದೆ, ಅದು ಕೆಎ–45–5786 ಐಸಿ ಆಗಿತ್ತು. ಆಗ ಜನರು ಬರಲು ಪ್ರಾರಂಭಿಸಿದರು, ಆದ್ದರಿಂದ ಆರೋಪಿ ತಮ್ಮ ಗಾಡಿಯನ್ನು ಎತ್ತಿಕೊಂಡು ಅಲ್ಲಿಂದ ಓಡಿ ಹೋದರು.

ಆಟೋ ನಮ್ಮ ಮಾವನ ಮೇಲೆ ಬಿದ್ದಿದ್ದರಿಂದ ಅವರ ತಲೆಗೆ ರಕ್ತ ಗಾಯವಾಗಿತ್ತು. ಎದೆಗೆ ಹ್ಯಾಂಡಲ್ ಹೊಡೆಯಿತು. ನನಗೆ ಎಡಗಣ್ಣಿನ ಪಕ್ಕದಲ್ಲಿ ಮತ್ತು ಎಡಗೈಗೆ ಏಟಾಗಿತ್ತು. ಆಗ ಜನರು ಅಲ್ಲಿಯೇ ಬರುತ್ತಿದ್ದ ಒಂದು ಆಟೋ ನಿಲ್ಲಿಸಿ ಅದರಲ್ಲಿ ನನ್ನ ಮಾವನನ್ನು ಹುಣಸೂರು ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದೆವು. ಅಲ್ಲಿ ಅವರನ್ನು ಮೈಸೂರಿಗೆ ಕರೆದುಕೊಂಡು ಹೋಗಿ ಎಂದು ಹೇಳಿದಾಗ ಅವರನ್ನು ಅಂಬುಲೆನ್ಸನಲ್ಲಿ ಮೈಸೂರಿಗೆ ಕರೆದುಕೊಂಡು ಹೋಗುವಾಗ ಬಿಳಿಕೆರೆ ಬಳಿ ನನ್ನ ಮಾವ ತೀರಿ ಹೋದರು. ನನಗೆ ಹುಣಸೂರು ಆಸ್ಪತ್ರೆಯಲ್ಲಿ ಕಣ್ಣಿನ ಬಳಿ ಹಾಗೂ ಕೈಗೆ ಆದ ಗಾಯಕ್ಕೆ ಹೋಲಿಗೆ ಹಾಕಿದರು. ನನ್ನ ಮಾವನನ್ನು ವಾಪಸ್ ಹುಣಸೂರು ಆಸ್ಪತ್ರೆಗೆ ಕರೆ ತಂದಾಗ ನಾನು ಹುಣಸೂರು ಪೊಲೀಸ್

ಠಾಣೆಗೆ ಹೋಗಿ ದೂರು ನೀಡಿದೆ. ಸಾಕ್ಷಿ ದೂರನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ–1 ಎಂದು, ಸಾಕ್ಷಿ ರುಜುವನ್ನು ನಿಪಿ–1(ಎ) ಎಂದು ಗುರುತಿಸಲಾಯಿತು. ಈ ಅಪಘಾತವು ನ್ಯಾಯಾಲಯದ ಮುಂದೆ ಇರುವ ಆರೋಪಿ ತನ್ನ ಗಾಡಿಯನ್ನು ಅಡ್ಡಾದಿಡ್ಡಿಯಾಗಿ ಓಡಿಸಿ ನನ್ನ ಮಾವನ ಆಟೋ ಪಕ್ಕಕ್ಕೆ ಹೊಡೆದಿದ್ದರಿಂದ ಆಗಿರುತ್ತದೆ.

ನಂತರ ಅದೇ ದಿನ ಮಧ್ಯಾಹ್ನ 2.30 ಗಂಟೆಗೆ ನನ್ನನ್ನು, ಚಾಸಾ–3 ರವರು ಘಟನೆ ನಡೆದ ಸ್ಥಳಕ್ಕೆ ಕರೆದುಕೊಂಡು ಹೋಗಿ ನನ್ನ ಸಹಿಯನ್ನು ಪಡೆದುಕೊಂಡರು. ಸದರಿ ಸಹಿಯನ್ನು ಈಗ ನೋಡಿ ಗುರುತಿಸಿದ್ದು ಅದು ಸ್ಥಳ ಮಹಜರ ಆಗಿದ್ದು, ಅದನ್ನು ನಿಪಿ–2 ಎಂದು, ಸಾಕ್ಷಿ ರುಜುವನ್ನು ನಿಪಿ–2(ಎ) ಎಂದು ಗುರುತಿಸಿದೆ. ಈ ಸಹಿಯನ್ನು ಮಾಡುವಾಗ ಸ್ಥಳದಲ್ಲಿ ಬೇರೆ ಯಾರು ಇರಲಿಲ್ಲ. ಅಲ್ಲಿ ಪೊಲೀಸರು ಮತ್ತೆ ಏನೂ ಮಾಡಲಿಲ್ಲ. ಮತ್ತೆ ಇನ್ಯಾವ ದಾಖಲೆಗೂ ನನ್ನ ಸಹಿಯನ್ನು ಪಡೆದುಕೊಳ್ಳಲಿಲ್ಲ. ಅಪಘಾತ ಹೇಗೆ ಆಯಿತು ಎಂದು ಕೇಳಿ ಪೊಲೀಸರು ನಿಪಿ–2 ನ್ನು ಬರೆದುಕೊಂಡು ನನ್ನ ಸಹಿ ಪಡೆದುಕೊಂಡರು. ಇದನ್ನು ಹೊರತು ಪಡಿಸಿ ನಾನು ಪೊಲೀಸರ ಮುಂದೆ ಯಾವುದೇ ಮರುಹೇಳಿಕೆ ನೀಡಿಲ್ಲ. ಪೊಲೀಸರು ನಕ್ಷೆಯನ್ನು ಪೊಲೀಸರು ಸ್ಥಳದಲ್ಲಿ ಬರೆದುಕೊಂಡರೋ ಇಲ್ಲವೋ ಎಂದು ನಾನು ನೋಡಿಲ್ಲ. ಈಗ ಸಾಕ್ಷಿಗೆ ತೋರಿಸಿದ ನಕ್ಷೆಯಲ್ಲಿರುವ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ–3 ಎಂದು ಸಾಕ್ಷಿ ರುಜುವನ್ನು ನಿಪಿ–3(ಎ) ಎಂದು ಗುರುತಿಸಲಾಯಿತು.

ಆ ದಿನ ಅಪಘಾತ ಮಾಡಿದ ದ್ವಿಚಕ್ರ ವಾಹನವನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಗೆ ಫೋಟೋಗಳನ್ನು ತೋರಿಸಿದಾಗ ಇದೇ ವಾಹನ ಎಂದು ಗುರುತಿಸಿದ ಮೇರೆಗೆ ಸದರಿ ಫೋಟೋಗಳನ್ನು ನಿಪಿ–4 ಮತ್ತು 5 ಎಂದು, ನಾವು ಹೋಗುತ್ತಿದ್ದೆವು ಎಂದು ಹೇಳಿದ ಆಟೋವನ್ನು ಗುರುತಿಸಬಲ್ಲೆ ಎಂದು ನುಡಿದು ಸಾಕ್ಷಿಗೆ ತೋರಿಸಿದ ಫೋಟೋಗಳಲ್ಲಿ ಸದರಿ ಆಟೋವನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ–6 ಮತ್ತು 7 ಎಂದು ಗುರುತಿಸಲಾಯಿತು. ನಿಪಿ–4 ರಿಂದ 7 ರ ಸಿಡಿಯನ್ನು ನಿಪಿ–8 ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

(ಈ ಹಂತದಲ್ಲಿ ಮಾನ್ಯ ಸಸಅ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಸಾಕ್ಷಿ ತನ್ನ ಸಾಕ್ಷ್ಯವನ್ನು ಅಭಿಯೋಜನೆಗೆ ಪ್ರತಿಕೂಲವಾಗಿ ನುಡಿದಿರುವ ಕಾರಣ ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿಸಲಾಯಿತು)

**<u>ಪಾಟೀಸವಾಲು ಸಸಅ ರವರಿಂದಃ-</u>**

ದಿನಾಂಕ 24.01.2023 ರಂದು ಪೊಲೀಸರು ನನ್ನನ್ನು ಠಾಣೆಗೆ ಕರೆಯಿಸಿ ಆರೋಪಿಯನ್ನು ತೋರಿಸಿದ ಮೇರೆಗೆ ನಾನು ಅಲ್ಲಿಗೆ ಹೋಗಿ ಆರೋಪಿಯನ್ನು ಗುರುತಿಸಿ, ನನ್ನ ಮರುಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿ. ಅದೇ ದಿನ ಅಪಘಾತಕ್ಕೆ ಕಾರಣವಾದ ಕೆಎ-45-ಇಸಿ-5786 ಸುಜುಕಿ ಆಕ್ಸಿಸ್ ಸ್ಕೂಟರನ್ನು ತೋರಿಸಿದಾಗ ಅದನ್ನು ನೋಡಿ ಗುರುತಿಸಿದೆ ಎಂದರೆ ಸರಿ. ಮಹಜರ ಸಮಯದಲ್ಲಿ ಪೊಲೀಸರು ನಿಪಿ-3 ನ್ನು ಸ್ಥಳದಲ್ಲೆ ತಯಾರಿಸಿ ನನ್ನ ಸಹಿ ಪಡೆದುಕೊಂಡರು ಎಂದರೆ ನನಗೆ ಗೊತ್ತಿಲ್ಲ. ನಿಪಿ-2 ಮತ್ತು 3 ಕ್ಕೆ ನನ್ನ ಜೊತೆ ಚಾಸಾ-3 ಮತ್ತು 4 ರವರು ಸಹಿ ಮಾಡಿರುತ್ತಾರೆ ಎಂದರೆ, ಸದರಿ ಸಾಕ್ಷಿದಾರರು ಮಹಜರಗೆ ಸಹಿ ಮಾಡಿದ್ದು ಸರಿ ಆದರೆ ನಕ್ಷೆಯನ್ನು ನಾನು ನೋಡಲಿಲ್ಲ. ಈ ಅಪಘಾತವು ಆರೋಪಿಯ ನಿರ್ಲಕ್ಷತನ, ಅತೀವೇಗ ಮತ್ತು ಅಜಾಗರೂಕತೆಯಿಂದ ಆಗಿದೆ ಎಂದರೆ ಸರಿ.

**<u>ಪಾಟೀಸವಾಲು ಃ ಆರೋಪಿ ಪರ ಶ್ರೀ ವಕೀಲರಿಂದ ಃ ಇಲ್ಲ</u>**

ಆರೋಪಿ ಪರ ವಕೀಲರು ಗೈರು ಹಾಜರು, ಆರೋಪಿ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.,

(ಜೈಬುನ್ನಿಸಾ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.ಹುಣಸೂರು.